**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಾನವಿ.**

**C.C. No. 645/2019**

CW-2
PW-6

ಸಾಕ್ಷಿದಾರರ ಹೆಸರು : ಗೋಪಾಲ

ತಂದೆಯ ಹೆಸರು : ಶಿವಪ್ಪ

ವಯಸ್ಸು : 45 ವರ್ಷ

ಉದ್ಯೋಗ : ತಾಲೂಕ ನುಾಡಲ್ ಅಧಿಕಾರಿ

ವಾಸ ಸ್ಥಳ : ಮಾನ್ವಿ

ದಿನಾಂಕ 09.01.2024 ರಂದು ಸತ್ಯ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ನಾನು ಕಳೆದ 10 ವರ್ಷಗಳಿಂದ ತಾಲೂಕ ನೂಡಲ್ ಅಧಿಕಾರಿ ಎಂದು ಕೆಲಸ ಮಾಡುತ್ತಿದ್ದೇನೆ. ನನಗೆ ಚಾಸ-3 ಮತ್ತು 8 ಗೋತ್ತು. ದಿಃ 12-07-2019 ರಂದು ಮಾನ್ವಿ-ರಾಯಚೂರು ರಸ್ತೆಯ ಕಪಗಲ್ ಕ್ರಾಸ್ ಹತ್ತಿರ ಕೆಎಸ್.ಆರ್.ಟಿ.ಸಿ ಬಸ್ ಮತ್ತು ಇನೋವ ಕಾರಿನ ಮಧ್ಯ ಆದ ಅಪಘಾತದ ವಿಷಯವಾಗಿ ಬೆ.10.00 ರಿಂದ 11.00 ರ ಸಮಯದಲ್ಲಿ ಪೋಲಿಸರು ಸ್ಥಳದಲ್ಲಿ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಕಡತದಲ್ಲಿ ಇರುವ ಪಂಚನಾಮೆಯಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಚಾಸಾ-3 ಮತ್ತು ಪೋಲಿಸರು ಸ್ಥಳದಲ್ಲಿ ಇದ್ದರು. ಪಂಚನಾಮೆ ಅಡಿಯಲ್ಲಿ ಪೋಲಿಸರು ಒಂದು ಸರಕಾರಿ ಬಸ್ಸು ಮತ್ತು ಇನೋವ ವಾಹನವನ್ನು ತಮ್ಮ ವಶಕ್ಕೆ ಪಡೆದಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್.ಎಲ್ ವಕೀಲರಿಂದಃ**

1. ಪಂಚ ಸಾಕ್ಷಿದಾರರಾಗಿ ಬರುವಂತೆ ಪೋಲಿಸರು ನನಗೆ ನೋಟಿಸು ಕೊಟ್ಟಿಲ್ಲ. ಪಂಚನಾಮೆಯಲ್ಲಿ ನಿಖರವಾಗಿ ಬರೆದಿರುವ ಸಂಗತಿಗಳು ನನಗೆ ಗೋತ್ತಿಲ್ಲ. ಪಂಚನಾಮೆಯಲ್ಲಿ ಬರೆದಿರುವ ಸಂಗತಿಗಳನ್ನು ನನಗೆ ಓದಿ ಹೇಳಿರುವುದಿಲ್ಲ. ಪೋಲಿಸರ ಹೇಳಿಕೆಯ ಆಧಾರದ ಮೇಲೆ ನಾನು ನಿಪಿ.7 ಕ್ಕೆ ಸಹಿ ಮಾಡಿರುತ್ತೇನೆ. ಅಪಘಾತ ಹೇಗೆ, ಯಾರ ತಪ್ಪಿನಿಂದ ಆಗಿತ್ತು, ಯಾರಿಗೆ ಗಾಯಗಳು ಆಗಿದ್ದವು ನನಗೆ ಗೋತ್ತಿಲ್ಲ. ಅಪಘಾತದಲ್ಲಿ ಒಳಗೊಂಡ ವಾಹನಗಳ ಪೈಕಿ ಬಸ್ ನಂಬರ ಗೋತ್ತು. ಆದರೆ ಇನೋವ ನಂಬರ ಗೋತ್ತಿಲ್ಲ. ಪಂಚನಾಮೆ ಸ್ಥಳದ ಚಕ್ ಬಂದಿ ನಿಖರವಾಗಿ ಹೇಳಲು ಬರುವುದಿಲ್ಲ. ಪೋಲಿಸರು ನನ್ನ ಸಮಕ್ಷಮ ನಿಪಿ.7 ರಂತೆ ಬೆ.10.00 ರಿಂದ 11.00 ರ ಸಮಯದಲ್ಲಿ ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಪೋಲಿಸರು ಮೊಬೈಲ್ ನಲ್ಲಿ ಫೊಟೋ ಪಡೆದಿರುತ್ತಾರೆ. ಯಾರ ಮೊಬೈಲ್ ನಲ್ಲಿ ಪಡೆದಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಗಾಯಳುಗಳು ನಮ್ಮ ಸಂಬಂಧಿಕರು ಇರುವುದರಿಂದ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)

ಓ.ಹೇ.ಕೆ.ಸರಿ ಇದೆ

**ಪ್ರ.ದ.ನ್ಯಾದಂ.ಗಳು, ಮಾನ್ವಿ**